Karnatak Law Society's
Vishwanathrao Deshpande Institute of Technology
(Approved by AICTE, New Delhi. Affiliated to VTU, Belagavi)
(Recognised Under Section 2(f) by UGC, New Delhi)
Udyog Vidya Nagar, Haliyal – 581329, Dist: Uttar Kannada (Karnataka)
P 361, 220334, 221409, Fax: 08284-220813
www.klsvdit.edu.in principal@klsvdit.edu.in

Date: 12-03-202

**ಪತ್ರಿಕಾ ಪ್ರಕಟಣೆ:**

## ಪ್ರೊ. ಶಂಕರ್ ಬಡಿಗೇರ್‌ಗೆ ಪಿ.ಎಚ್.ಡಿ ಪ್ರದಾನ

ಕರ್ನಾಟಕ ಲಾ ಸೊಸೈಟಿಯ ವಿಶ್ವನಾಥರಾವ್ ದೇಶಪಾಂಡೆ ತಾಂತ್ರಿಕ ಮಹಾವಿದ್ಯಾಲಯ ಹಳಿಯಾಳದ ಮೆಕ್ಯಾನಿಕಲ್ ಇಂಜನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶಂಕರ್ ಬಡಿಗೇರ್ ಅವರು ಮಂಡಿಸಿದ 'ಸ್ಟಡೀಸ್ ಆನ್ ಫ್ರೀ ಎಂಡ್ ಇಂಪಿಂಜಿಂಗ್ ಫ್ಲೇಮ್ ಜೆಟ್ ಕ್ಯಾರೆಕ್ಟರಿಸ್ಟಿಕ್ಸ್' ಎಂಬ ಮಹಾ ಪ್ರಬಂಧಕ್ಕೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿ.ತಾ.ವಿ) ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ಮಾರ್ಚ್ 10 ರಂದು ನಡೆದ ವಿಶ್ವವಿದ್ಯಾಲಯ ಘಟಿಕೋತ್ಸವ ಸಮಾರಂಭದಲ್ಲಿ ವಿ.ತಾ.ವಿ ಉಪಕುಲಪತಿಗಳಾದ ಡಾ. ಕರಿಸಿದ್ದಪ್ಪ, ಶೈಕ್ಷಣಿಕ ಕುಲಸಚಿವರಾದ ಡಾ. ಎ. ಎಸ್. ದೇಶಪಾಂಡೆ ಮತ್ತು ಮೌಲ್ಯಮಾಪನ ಕುಲಸಚಿವರಾದ ಡಾ. ಬಿ. ಇ. ರಂಗಸ್ವಾಮಿ ಅವರ ಉಪಸ್ಥಿತಿಯಲ್ಲಿ ಪದವಿ ಪ್ರದಾನ ಮಾಡಲಾಯಿತು.

ಬೆಳಗಾವಿಯ ಗೋಗಟೆ ತಾಂತ್ರಿಕ ಮಹಾವಿದ್ಯಾಲಯದ ಡಾ. ಟಿ ಆರ್ ಅನಿಲ್‌ಕುಮಾರ್ ಈ ಸಂಶೋಧನಾ ಕಾರ್ಯದಲ್ಲಿ ಮಾರ್ಗದರ್ಶನ ನೀಡಿದ್ದರು. ಹಳಿಯಾಳ ಪಟ್ಟಣದ ಗ್ರಾಮದೇವಿ ಗಲ್ಲಿ ನಿವಾಸಿಯಾಗಿರುವ ಶಂಕರ್ ಬಡಿಗೇರ್ ಅವರು ಶ್ರೀಮತಿ ಶಾಂತಾ ಮತ್ತು ದಿ. ನಾರಾಯಣ ಬಡಿಗೇರ್ ಅವರ ಪುತ್ರರಾಗಿದ್ದಾರೆ.

ಈ ಸಾಧನೆಗೆ ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ. ವಿನಾಯಕ ಲೋಕುರ್, ಪ್ರಾಂಶುಪಾಲರಾದ ಡಾ. ವಿ ಎ ಕುಲಕರ್ಣಿ, ಡಾ. ಮಹೇಂದ್ರ ದೀಕ್ಷಿತ್, ಡಾ. ಕೆ ಎಸ್ ಪೂಜಾರ್ ಮತ್ತು ಸಿಬ್ಬಂದಿ ವರ್ಗದವರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


VARAYA TECHNOLOGICAL UNIVERSITY, BELAGAVI
21